**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 28/2024** **ಅ.ಸಾ.6**

**ಜಾ.ಸಾ.17**

| | | |
|---|---|---|
| ಸಾಕ್ಷಿದಾರರ ಹೆಸರು | - | ಉಮೇಶ್ ಉಪಾಧ್ಯಾಯ |
| ತಂದೆಯ ಹೆಸರು | - | ಮಹಾಬಲ ಉಪಾಧ್ಯಾಯ |
| ವಯಸ್ಸು | - | 60 ವರ್ಷ |
| ಉದ್ಯೋಗ | - | ನಿವೃತ್ತ ವೈದ್ಯಾಧಿಕಾರಿ |
| ವಿಳಾಸ | - | ಜಿಲ್ಲಾ ಆಸ್ಪತ್ರೆ, ಉಡುಪಿ. |

ದಿನಾಂಕಃ 05-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

ನಾನು ಡಿಸೆಂಬರ್ 2015 ರಿಂದ 31-12-2025 ರವರೆಗೆ ಉಡುಪಿ ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 31-03-2024 ರಂದು ಸಂಜೆ 6-30 ಗಂಟೆಗೆ ನಾನು ಕರ್ತವ್ಯದಲ್ಲಿದ್ದಾಗ ಕಾಪು ಪೋಲಿಸ್ ಠಾಣಾ ಪಿ ಸಿ ನಂ.1222 ಮತ್ತು 333 ಇವರು ಈ ದಿವಸ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ಹಲ್ಲೆಯ ಹಿನ್ನೆಲೆಯಲ್ಲಿ ಪರೀಕ್ಷೆಗಾಗಿ ಕರೆ ತಂದಿದ್ದು ಆತನನ್ನು ಪರೀಕ್ಷಿಸಿ ನೋಡಲಾಗಿ ಆತನ ದೇಹದ ಮೇಲೆ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

1. ಎದೆಯ ಮೇಲೆ 1/2 X 1/2 ಅಳತೆಯ ಕಚ್ಚಿದ ಗಾಯ ಅದು ತರಚಿದ ಗಾಯ ಆಗಿತ್ತು.

2. ಬಲ ಮೊಣಗೈಯಲ್ಲಿ 1/2 X 1/2 ಅಳತೆಯ ತರಚಿದ ಗಾಯ

3. ಕುತ್ತಿಗೆಯಲ್ಲಿ 1/2 X 1/2 ಅಳತೆಯ ತರಚಿದ ಗಾಯ

ಮೇಲ್ಕಂಡ ಮೂರೂ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿತ್ತು. ಆರೋಪಿಯನ್ನು ವಿಚಾರಿಸಲಾಗಿ, ಸದ್ರಿ ಗಾಯಗಳು ತನ್ನ ಹೆಂಡತಿ ಜ್ಯೋತಿ ಗಾಯ ಗೊಳಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದ್ರಿ ಗಾಯದ ಪ್ರಮಾಣವನ್ನು ಈಗ ನೋಡುತ್ತಿದ್ದು, ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಆರ್.ಎ.ರವರಿಂದ**

ನಿಪಿ-10 ರಲ್ಲಿ ನಮೂದಿಸಿರುವ ಗಾಯಗಳು ಯಾವ ರೀತಿ ಆಗಿವೆ ಎಂದು ಆರೋಪಿ ನನ್ನ ಬಳಿ ಹೇಳಿಲ್ಲ ಎಂದರೆ ಸರಿಯಲ್ಲ. ಸದ್ರಿ ಗಾಯಗಳನ್ನು ಆತನ ಹೆಂಡತಿ ಮಾಡಿದ್ದಾರೆ ಎಂದು ನನಗೆ ಪೋಲಿಸರು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ-10 ನ್ನು ಪೋಲಿಸರ ಪ್ರಕರಣಕ್ಕೆ ಪೂರಕವಾಗಿ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ